ಉಷಾ ಸೋಗಾಲ್, ತುರಹಳ್ಳಿ
*ಕಣ್ಣು ಸ್ತ್ರೀಲಿಂಗವೋ, ಪುಲ್ಲಿಂಗವೋ?*



ಪುಲ್ಲಿಂಗ್ ಪವರ್ ಇರುವ ಸ್ತ್ರೀಲಿಂಗ!

ಶೀಲಾ ಸತ್ಯೇಂದ್ರಸ್ವಾಮಿ, ಹರವೆಮಠ
*ಒಂದೇ ಸಾಲಿನ ಉತ್ತರದಲ್ಲಿ ಜೀವನದರ್ಶನ ಮಾಡಿಸುವ ನಿಮ್ಮನ್ನು ಸರ್ವಜ್ಞ ನೆನ್ನಲೆ ರಾಮ್‌ಜೀ?*
ಹಾಗೆಂದರೆ ಸರ್ವಜ್ಞನಿಗೆ ಅವಮಾನ ಮಾಡಿದಂತಲ್ಲವೇ! ಬೇಕಿದ್ದರೆ ಸರ್ವ ಅಜ್ಞ ಎನ್ನಿರಿ.

ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು
*ಪತ್ನಿಯಾದವಳು ಪತಿಗೆ ಬೆನ್ನೆಲುಬಂತೆ; ಹಾಗಾದರೆ ಪತಿಯಾದವನು?*
ಬೇಕಾದಾಗ ಬಳಸಲು, ಬೇಡವಾದಾಗ ಪಕ್ಕ ಇಡಲು ಆಗುವಂತಹ ಊರುಗೋಲು!

ಮನೋರಮಾ ಪ್ರಭು, ಕಾಸರಕೋಡ
*ಕ್ರಿಸ್‌ಮಸ್ ಹಬ್ಬದ ಸಂದೇಶ ಏನು?*
ಸಂತನಿಗೆ ಇಡೀ ಪ್ರಪಂಚ ಸ್ವಂತ ಎಂಬುದು!

ಆಶಾ ಎಸ್. ಹೊನ್ನಾಳಿ
*ಹಿಂದಿನ ಋಷಿಮುನಿಗಳಿಗೆ ಇದ್ದಂತೆ ಇಂದಿನ ಸ್ವಾಮೀಜಿಗಳಿಗೂ ಶಾಪ ಕೊಡುವ ಶಕ್ತಿ ಇದ್ದಿದ್ದರೆ?*



ಶಾಪ ಹಾಕುವುದನ್ನೂ ವ್ಯಾಪಾರ ಮಾಡಿಕೊಂಡು ವಿರೋಧಿಗಳಿಂದ ಹಣ ಪಡೆಯುತ್ತಿದ್ದರು!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಸರ್ವಸಂಗ ಪರಿತ್ಯಾಗಿಗಳಾದ ಸ್ವಾಮೀಜಿಗಳಿಗೇಕೆ ನೂರಾರು ಎಕರೆ ಭೂಮಿ ಬೇಕು?*
ಬೇಡ ಬಿಡಿ. ನೂರೈದೇ ಕೊಡಿ ಸಾಕು!

ಜಿ.ಎಚ್. ನಾಯ್ಕ, ಹೊನ್ನಾವರ
*ಜ್ಯೋತಿಗೂ, ಜ್ವಾಲೆಗೂ ಇರುವ ವ್ಯತ್ಯಾಸವೇನು?*
ಕಿಡಿಯಿಂದ ಬೆಳಗಿದರೆ ಜ್ಯೋತಿ, ಕಿಡಿಗೇಡಿಯಿಂದ ಬೆಳಗಿಸಲ್ಪಟ್ಟರೆ ಜ್ವಾಲೆ!

ಕೆ. ಶ್ರೀನಿವಾಸರಾವ್, ಹರಪನಹಳ್ಳಿ
*ಬೆಳ್ಳಗಿರುವುದೆಲ್ಲ ಹಾಲಲ್ಲ; ಆದರೂ ಬಿಳಿ ಬಣ್ಣದ ಹೆಂಡತಿಯನ್ನೇ ಬಯಸುವುದೇಕೆ?*
ಮಕ್ಕಳಾದರೂ ತನ್ನಂತೆ ಕರಿಮುಸುಡಿಯಲ್ಲದೆ ಚೆನ್ನಾಗಿರಲೆಂಬ ಆಸೆ!

ಅಕ್ಷಯ ಜೈನ್, ಹೂವಿನಹಡಗಲಿ
*ಭುವನ ಸುಂದರಿಯನ್ನು ಪ್ರೀತಿಸಲೋ ಅಥವಾ ಭವನ ಸುಂದರಿಯನ್ನು ಪ್ರೀತಿಸಲೋ?*
ಇಡೀ ಜಗತ್ತನ್ನೇ ಪ್ರೀತಿಸಿ; ಅವರು ಪ್ರೀತಿಸಬೇಕೆಂದೇನಿಲ್ಲವಲ್ಲ!

ಎಚ್.ಆರ್. ದೇಸಾಯಿ, ರಾಯಚೂರು
*ಜೀವನ ಬೇಸರ ಮೂಡಿ ವಿಷ ಕುಡಿದು ಸಾಯುವುದಕ್ಕಿಂತ ವಿಸ್ಕಿ ಕುಡಿಯುತ್ತಾ ಬದುಕುವುದು ಲೇಸಲ್ಲವೆ?*
ಶುದ್ಧ ಅವಿವೇಕ! ಸತ್ತಂತೆ ಬದುಕುವುದಕ್ಕಿಂತ ಬದುಕಿರುವಾಗಲೇ ಸಾಯುವುದು ಮೇಲು.

ಎಂ.ಎಸ್.ಧರ್ಮೇಂದ್ರ, ಜಿಟಿಆರ್‌ಇ ಕ್ಯಾಂಪಸ್
*ಆಗಾಗ ಸಭಾತ್ಯಾಗ ಮಾಡುವ ಶಾಸಕರನ್ನು ವಿಧಾನಸಭೆಯಿಂದ ನಿಷೇಧಿಸಿದರೆ ಹೇಗೆ?*
ತೂಕಡಿಸುವವನಿಗೆ ಹಾಸಿಗೆ ಹಾಸಿಕೊಟ್ಟಂತಾಗುತ್ತದೆ!

ಜಿ.ಎನ್. ಸ್ವಾಮಿ, ತುಮಕೂರು
*ಶ್ರೀರಾಮ ಕೊಡುವ ಉತ್ತರಕ್ಕೂ, ರಾಮ್ ಕೊಡುವ ಉತ್ತರಕ್ಕೂ ಏನು ವ್ಯತ್ಯಾಸ?*
ಅದು ಪರಿಹಾರಕ್ಕೆ, ಇದು ಪರಿವಾರಕ್ಕೆ.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ
*ಅಲ್ಲಲ್ಲಿ ಬಿಟ್ಟು, ಎಲ್ಲೆಲ್ಲು ಪಿಟ್ಟು; ಹೇಳುವಿರೆ ಏನೆಂದು ಇದರ ಗುಟ್ಟು? ಹೇಳಿದರೆ ನಿಮಗೊಂದು ಸಿಹಿಯ ಒಬ್ಬಟ್ಟು!*
ಮಾಡುವೆನು ರಟ್ಟು, ಟಾರು ಛಟ್ಟು, ಪಾಟ್‌ಹೋಲು ಅಷ್ಟಷ್ಟು; ಕಾರಣ ಲಂಚದ ಹ್ಯಾಬಿಟ್ಟು!

ಆರ್. ಮಧುಸೂದನ್, ಹಾಸನ
*ಕೆರೆಯ ನೀರನ್ನು ನದಿಗೆ ಚೆಲ್ಲಿದರೆ ಏನಾಗಬಹುದು ಸರ್?*
ಜಲಮಾಲಿನ್ಯ!

## ಬಹುಮಾನಿತ ಪ್ರಶ್ನೆ

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.
*ಯಾವ ಕ್ರೀಡೆಯಲ್ಲಿ ಸೋತವರು ಆನಂದ ಪಡುತ್ತಾರೆ?*
ಗೆಲ್ಲುವುದಕ್ಕಿಂತ ಸೋತಾಗ ಹೆಚ್ಚು ಗಳಿಸುವ ಬೆಟ್ಟಿಂಗ್ ಕ್ರಿಕೆಟಿಗರು!

ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ
*ಪಾರ್ಥೇನಿಯಂಗೆ ಕಾಂಗ್ರೆಸ್ ಹುಲ್ಲು ಎನ್ನುತ್ತಾರೆ. ನಾಮ ಅನ್ವರ್ಥವೇ?*
ಕಪ್ಪನೆಯ ಚಿಕ್ಕ ಅಶುಭಪಕ್ಷಿಗಳ ಗುಂಪಿಗೂ ಕಾಂಗ್ರೆಸ್ ಎನ್ನುತ್ತಾರೆ ಎನ್ನಬೇಕಾದರೆ.... ಏನೋ ಇರಬೇಕು!

ಎಚ್.ಆರ್.ಕಡಿವಾಲ, ಬದಾಮಿ
*ಕಾರ್ಯಕ್ರಮದ ನಿರೂಪಣೆ ಮಾಡಲು ಹೆಣ್ಣುಮಕ್ಕಳಿಗೆ ಹೇಳಲು ಕಾರಣವೇನು?*
ಹುಚ್ಚಾರಣೆ ದಪ್ಪಿದ್ದರೂ ಚನ ದಟೆತುಕೊಲ್ಲುದ್ದಾರೆಂತು!

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಒಡೆದ ಹಾಲು, ಒಡೆದ ಮುತ್ತು, ಒಡೆದ ಮನಸ್ಸು ಇವುಗಳನ್ನು ಸರಿಪಡಿಸಲು ಬಾರದು ಎಂದು ಇಲ್ಲೊಬ್ಬ ಹೇಳಿದ್ದಾನಲ್ಲಾ...?*




ಮನಸ್ಸಿದ್ದರೆ ಮಾರ್ಗ! ಚೀಸ್ ಆಗಿ ಬಳಸಿ; ಅರ್ಧ ಮುತ್ತನ್ನು ಓಲೆ, ನತ್ತಿಗೆ ಹುದುಗಿಸಿ; ವ್ಯಕ್ತಿಯ ಬದಲು ವಿಷಯ ಮಾತ್ರ ದ್ವೇಷಿಸಿ.

ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ
*ಪ್ರೇಮದ ಮುಂದುವರಿದ ಭಾಗ?*
ವಿವಾಹ ಅಥವಾ ವಿವಾದ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಅತಿಥಿ ದೇವೋ ಭವ ಎನ್ನುತ್ತಿದ್ದ ಈ ನಾಡಿನಲ್ಲಿ ಈಗ ಅತಿಥಿಗಳ ಸತ್ಕಾರ ಕಡಿಮೆ ಆಗುತ್ತಿದೆಯಲ್ಲಾ...?*
ಅತಿಥಿಗಳದೇ ತಪ್ಪು; ಸೀರಿಯಲ್ ಸಮಯದಲ್ಲಿ ಬರಬಾರದು ಎಂಬ ಪರಿಜ್ಞಾನ ಬೇಡವೇ ಅವರಿಗೆ...! ಛೆ!

■ ರಾಮ್